## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳಲ್ಲಿನ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2013–14ನೇ ಸಾಲಿನಲ್ಲಿ ವ್ಯತ್ಯಾಸವಾಗಿರುವ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಗಳ ಅನುದಾನ ಬಿಡುಗಡೆ ಕುರಿತು.

**ಉಲ್ಲೇಖ:** 1.ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:58:ಎಎಫ್ಎನ್ 2012 ದಿ.01.04.2013
2.ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:241:ಎಎಫ್ಎನ್ 2013 ದಿ.01.08.2013
3.ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:35:ಸುಗ್ರಾಯೋ:2013 ದಿ:16.05.2013
4.ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:35:ಸುಗ್ರಾಯೋ:2013 ದಿ:15.10.2013

**ಪ್ರಸ್ತಾವನೆ:**

ಉಲ್ಲೇಖ(1) ಮತ್ತು (2)ರ ಆದೇಶಗಳಲ್ಲಿ ಸುವರ್ಣ ಗ್ರಾಮೋದಯ ಯೋಜನೆಯನ್ನು 2013–14ನೇ ಸಾಲಿನಲ್ಲಿ ಮುಂದುವರಿಸಲಾಗಿದೆ. ಈ ಯೋಜನೆಗಾಗಿ 2013–14ನೇ ಸಾಲಿನ ಮೊದಲ ಆಯವ್ಯಯದಲ್ಲಿ ರೂ.345.00 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿತ್ತು. ಸದರಿ ಆಯವ್ಯಯದಂತೆ ಮೊದಲ ಕಂತಿನ ಅನುದಾನವನ್ನು ರೂ.85.00 ಕೋಟಿ ಬಿಡುಗಡೆ ಮಾಡುವಾಗ ಹಿಂದಿನ ಆಯವ್ಯಯಕ್ಕೆ ತಕ್ಕಂತೆ ಬಂಡವಾಳ ವೆಚ್ಚ, ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಗೆ ಅನುದಾನವನ್ನು ಉಲ್ಲೇಖ(3) ಆದೇಶದಲ್ಲಿ ಈ ಕೆಳಗಿನಂತೆ ಬಿಡುಗಡೆ ಮಾಡಲಾಗಿತ್ತು.

| | |
|---|---|
| 1. 4215–02–800–0–02–132(ಯೋಜನೆ) ಬಂಡವಾಳ ವೆಚ್ಚಗಳು | – 5363.50 ಲಕ್ಷಗಳು |
| 2. 4215–02–800–0–02–422 (ಯೋಜನೆ) ವಿಶೇಷ ಘಟಕ ಯೋಜನೆ | – 2143.70 ಲಕ್ಷಗಳು |
| 3. 4215–02–800–0–02–423 (ಯೋಜನ) ಗಿರಜನ ಉಪಯೋಜನೆ | – 992.80 ಲಕ್ಷಗಳು |
| **ಒಟ್ಟು** | **– 8500.00ಲಕ್ಷಗಳು** |

ಹಾಗೂ 2013–14 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಸುವರ್ಣ ಗ್ರಾಮೋದಯ ಯೋಜನೆಗೆ ಅನುದಾನವನ್ನು ರೂ.109.67 ಕೋಟಿಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಅದರಂತೆ ಉಲ್ಲೇಖ(4)ರನ್ವಯ ರೂ.2467.00 ಲಕ್ಷಗಳನ್ನು ಈ ಕೆಳಗಿನಂತೆ ಬಿಡುಗಡೆ ಮಾಡಲಾಗಿರುತ್ತದೆ.

| | | |
|---|---|---|
| 1. 4215-02-800-0-02-132(ಯೋಜನೆ) ಬಂಡವಾಳ ವೆಚ್ಚಗಳು | | – 1556.67 ಲಕ್ಷಗಳು |
| 2. 4215-02-800-0-02-422 (ಯೋಜನೆ) ವಿಶೇಷ ಘಟಕ ಯೋಜನೆ | | – 622.18 ಲಕ್ಷಗಳು |
| 3. 4215-02-800-0-02-423 (ಯೋಜನ) ಗಿರಜನ ಉಪಯೋಜನೆ | | – 288.15 ಲಕ್ಷಗಳು |
| | ಒಟ್ಟು | – **2467.00** ಲಕ್ಷಗಳು |

ಈ ಎರಡು ಆದೇಶಗಳಲ್ಲಿ ಬಂಡವಾಳ ವೆಚ್ಚ 4215-02-800-0-02-132 (ಯೋಜನೆ) ರಡಿಯಲ್ಲಿ ಬಿಡುಗಡೆ ಮಾಡಿದ ಒಟ್ಟು ಮೊತ್ತ ರೂ.69.2017 ಕೋಟಿ (ರೂ.53.635+15.566ಕೋಟಿಗಳು) ಪರಿಷ್ಕೃತ ಅಂದಾಜಿನಲ್ಲಿ ನಿಗಧಿಮಾಡಿದ ರೂ.46.3206 ಕೋಟಿಗಳಿಂತ ಹೆಚ್ಚಾಗಿ ರೂ.22.881 ಕೋಟಿ ಬಿಡುಗಡೆಯಾಗಿತ್ತು.

ಇದನ್ನು ಸರಿಪಡಿಸಿ, ಮರು ಆದೇಶ ಹೊರಡಿಸಲು ಖಜಾನೆ ಇಲಾಖೆಯ (TNMC) ಅಧಿಕಾರಿಗಳು ತಿಳಿಸಿರುತ್ತಾರೆ. ಆದ್ದರಿಂದ ಬಂಡವಾಳ ವೆಚ್ಚದಡಿಯಲ್ಲಿ ನಿಗಧಿತ ಅನುದಾನಕ್ಕಿಂತ ಹೆಚ್ಚಿಗೆ ಬಿಡುಗಡೆಯಾಗಿದ್ದ ರೂ.22.881 ಕೋಟಿಗಳನ್ನು ಹಿಂದಿನ ಆದೇಶಗಳಲ್ಲಿ ಕಡಿಮೆ ಬಿಡುಗಡೆಯಾಗಿರುವ ವಿಶೇಷ ಘಟಕ ಯೋಜನೆಯಡಿ ರೂ.1.2912 ಕೋಟಿ ಹಾಗೂ ಗಿರಿಜನ ಉಪ ಯೋಜನೆಯಡಿ ರೂ.21.5950 ಕೋಟಿಗಳನ್ನು ಹಂಚಿಕೆ ಮಾಡಬೇಕಾಗಿದೆ. ಪ್ರಯುಕ್ತ ಈ ಆದೇಶ

**ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:115:ಸುಗ್ರಾಯೋ:2013, ಬೆಂಗಳೂರು, ದಿನಾಂಕ:28.11.2013**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸುವರ್ಣ ಗ್ರಾಮೋದಯ ಯೋಜನೆ ಅನುಷ್ಠಾನಕ್ಕಾಗಿ ಬಂಡವಾಳ ವೆಚ್ಚದಡಿ ಹೆಚ್ಚುವರಿಯಾಗಿ ಬಿಡುಗಡೆಯಾಗಿದ್ದ ರೂ.22.8817 ಕೋಟಿಗಳನ್ನು ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಅನುಬಂಧದಲ್ಲಿ ವಿವರಿಸಲಾದಂತೆ 4 ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನವನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಭರಿಸತಕ್ಕದ್ದು.

1. 4215-02-800-0-02-422 (ಯೋಜನೆ) ವಿಶೇಷ ಘಟಕ ಯೋಜನೆ – ರೂ.1.2912 ಕೋಟಿಗಳು
2. 4215-02-800-0-02-423(ಯೋಜನೆ) ಗಿರಿಜನ ಉಪ ಯೋಜನೆ– ರೂ. 21.5905 ಕೋಟಿಗಳು

ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಸುವರ್ಣ ಗ್ರಾಮೋದಯ ಯೋಜನೆಯಡಿ ಅನುಮೋದಿಸಿರುವ ಗ್ರಾಮಗಳ ಅಭಿವೃದ್ಧಿ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮಾತ್ರ ವಿನಿಯೋಗಿಸತಕ್ಕದ್ದು.

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ಅನುದಾನವು SCP & TSP ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮಾತ್ರ ವಿನಿಯೋಗಿಸತಕ್ಕದ್ದು.

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಪ್ರತ್ಯೇಕವಾದ ವೆಚ್ಚದ ವಿವರವನ್ನು ಪ್ರತಿ ಮಾಹೆಯಲ್ಲಿ ಸರ್ಕಾರಕ್ಕೆ ಸಲ್ಲಿಸುವ ಪ್ರಗತಿ ವರದಿಯಲ್ಲಿ ನಮೂದಿಸುವುದು.

ಕರ್ನಾಟಕ ರಾಜ್ಯಪಾಲರ
ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾಯೋ& ಪಘಅಯೋ)
ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಗಳನ್ನು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಳಗಾವಿ, ರಾಯಚೂರು, ಬಳ್ಳಾರಿ ಮತ್ತು ತುಮಕೂರು.
2. ಉಪಕಾರ್ಯದರ್ಶಿಗಳು/ಮುಖ್ಯ ಯೋಜನಾಧಿಕಾರಿಗಳು/ ಮುಖ್ಯ ಲೆಕ್ಕಾಧಿಕಾರಿಗಳು ಬೆಳಗಾವಿ, ರಾಯಚೂರು, ಬಳ್ಳಾರಿ ಮತ್ತು ತುಮಕೂರು.
3. ಜಿಲ್ಲಾ ಖಜಾನಾಧಿಕಾರಿಗಳು, ಬೆಳಗಾವಿ, ರಾಯಚೂರು, ಬಳ್ಳಾರಿ ಮತ್ತು ತುಮಕೂರು.
4. ಮಹಾಲೇಖಪಾಲರು, ಬೆಂಗಳೂರು.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

6. ಉಪ ನಿರ್ದೇಶಕರು, ಖಜಾನೆ ಗಣಕ ಮಾಹಿತಿ ಜಾಲ, ಖನಿಜ ಭವನ, ಬೆಂಗಳೂರು.
7. ಖಜಾನೆಗಳ ಉಪ ನಿರ್ದೇಶಕರು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು.
8. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
9. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ,ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
11. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ,ಬೆಂಗಳೂರು
12. ಸರ್ಕಾರದ ಉಪಕಾರ್ಯದರ್ಶಿ(ಆಡಳಿತ) ಗ್ರಾ.ಅ.ಪಂ.ರಾಜ್.ಇಲಾಖೆ, ಕಂಪ್ಯೂಟರ್ ಸೇಲ್, ಈ ಆದೇಶವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು
13. ಸಂಪಾದಕರು ಕರ್ನಾಟಕ ವಿಕಾಸ ಪತ್ರಿಕೆ. (ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು)
14. ರಕ್ಷ ಕಡತಕ್ಕೆ / ಹೆಚ್ಚುವರಿ ಪ್ರತಿ.

# ಅನುಬಂಧ

## 2013–14ನೇ ಸಾಲಿನ ಸುವರ್ಣ ಗ್ರಾಮೋದಯ ಯೋಜನೆಯ ಅನುದಾನ ಬಿಡುಗಡೆ

**ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:115:ಸುಗ್ರಾಯೋ:2013 ದಿ:28.11.2013**

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ಜಿಲ್ಲೆಗಳು | ಬಿಡುಗಡೆ ಮಾಡಬೇಕಾದ ಅನುದಾನ SCP | ಬಿಡುಗಡೆ ಮಾಡಬೇಕಾದ ಅನುದಾನ TSP | ಒಟ್ಟು |
|---|---|---|---|---|
| 1 | ಬೆಳಗಾವಿ | 1.2912 | 7.00 | 8.2912 |
| 2 | ರಾಯಚೂರು | – | 3.5905 | 3.5905 |
| 3 | ಬಳ್ಳಾರಿ | – | 7.00 | 7.00 |
| 4 | ತುಮಕೂರು | – | 4.00 | 4.00 |
| **ಒಟ್ಟು** | | **1.2912** | **21.5905** | **22.8817** |

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾಯೋ& ಪಘಅಯೋ)
ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ